

# ಜಾಲೀಮನೆಯಲ್ಲಿ ಬಾಟ್ಲಿ ಮ್ಯೂಸಿಯಂ!

ಇದು ಮದ್ಯದಂಗಡಿಯಲ್ಲ, ಮಾರಾಟಕ್ಕಿಟ್ಟ ಬಾಟಲಿಗಳೂ ಅಲ್ಲ. ತಂಪು ಪಾನೀಯ ಅಂಗಡಿಯಂತೂ ಅಲ್ಲವೇ ಅಲ್ಲ. ಇದು ಬಾಟಲಿ ಮ್ಯೂಸಿಯಂ! ಉ.ಕ. ಜಿಲ್ಲೆಯ ಯಲ್ಲಾಪುರ ತಾಲೂಕಿನ ಹಿತ್ಲಳ್ಳಿ ಸಮೀಪದ ಜಾಲೀಮನೆಯ ಕೃಷಿಕ ವೆಂಕಣ್ಣನ ಕಲ್ಪನೆಯಲ್ಲಿ ಅರಳಿದ ವಿನೂತನ ಹವ್ಯಾಸವಿದು.

ಹಳೆಯ ಕಲೆ, ವಸ್ತುವಿಗೆ ಆಧುನಿಕ ಸ್ಪರ್ಶ ನೀಡುವವರು ಅನೇಕರಿದ್ದಾರೆ. ಹಳ್ಳಿ ಹಾಗೂ ಪಟ್ಟಣಗಳಲ್ಲಿ ಬಹುತೇಕರು ನಾಣ್ಯಗಳ ಸಂಗ್ರಹ, ಅಂಚೆ ಚೀಟಿಗಳ ಸಂಗ್ರಹ, ಬೇರುಬೊಗಟೆಗಳ ಸಂಗ್ರಹ, ಧಾರಾವಾಹಿಗಳ ಸಂಗ್ರಹ, ಕಲಾತ್ಮಕ ಚಿತ್ರಗಳ ಸಂಗ್ರಹ, ಗುಟಕಾ ಚೀಟಿ ಸಂಗ್ರಹ– ಹೀಗೆ ತೊಡಗಿರುವುದುಂಟು. ಆದರೆ ಜಾಲೀಮನೆ ವೆಂಕಣ್ಣ ವಿಶಿಷ್ಟ, ವೈವಿಧ್ಯಮಯ ಹಾಗೂ ತೀರಾ ಅಪರೂಪ ಎನ್ನಬಹುದಾದ ಗಾಜಿನ ಬಾಟ್ಲಿಗಳ ಸಂಗ್ರಹದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ವೆಂಕಣ್ಣ ಕೃಷಿಕ. ಜತೆಗೆ ನಿಸರ್ಗದಲ್ಲಿ ಸಿಗುವ ಬೇರು ಕಾಂಡಗಳಿಗೆ ಆಕಾರ ನೀಡುವುದು, ನ್ಯಾಚುರಲ್ ಗ್ರೀಟಿಂಗ್ಸ್ ತಯಾರಿಸುವುದು, ಹಳೇ ಕಾಲದ ವೈವಿಧ್ಯಮಯವಾದ ವಸ್ತುಗಳ ಸಂಗ್ರಹ, ಅಶ್ವತ್ಥ ಎಲೆಯ ಮೇಲೆ ಸಾಹಿತಿಗಳ, ಮಠಾಧೀಶರ ಚಿತ್ರ ಬಿಡಿಸುವುದು– ಹೀಗೆ ವಿಭಿನ್ನವಾದ ಪ್ರವೃತ್ತಿಯಲ್ಲಿ ಕಳೆದ ಸುಮಾರು 30 ವರ್ಷಗಳಿಂದ ತಮ್ಮನ್ನು ಗುರುತಿಸಿಕೊಂಡಿದ್ದಾರೆ. 250ಕ್ಕೂ ಹೆಚ್ಚು ಬೇರು, ಬೊಗಟೆಯಲ್ಲಿ ಸಹಜವಾಗಿ ಉದ್ಭವವಾಗಿರುವ ಗಣಪತಿ ಆಕಾರ ಹೋಲುವ ಆಕರ್ಷಕ ಕಲಾಕೃತಿಗಳನ್ನು ವೆಂಕಣ್ಣ ಸಂಗ್ರಹಿಸಿದ್ದಾರೆ. ಸಾವಿರ ಅಶ್ವತ್ಥ ಎಲೆಯಲ್ಲಿ ಭಗವದ್ಗೀತೆಯ 18 ಅಧ್ಯಾಯದ 700 ಶ್ಲೋಕಗಳನ್ನು ಬರೆದಿರುವ ಸಾಧನೆಯನ್ನೂ ಮಾಡಿದ್ದಾರೆ.

ಜಾಲಿಮನೆ ವೆಂಕಣ್ಣ ಕಳೆದ ನಾಲ್ಕೈದು ವರ್ಷಗಳಿಂದ ತರತರಹದ ಗಾಜಿನ ಬಾಟಲಿಗಳನ್ನು ಸಂಗ್ರಹಿಸುತ್ತಿದ್ದು ತಮ್ಮ ಸ್ವಸ್ತಿಕ್ ಆರ್ಟ್ ಗ್ಯಾಲರಿಯಲ್ಲಿ ಗಾಜಿನ ಬಾಟಲಿಗೂ ಸ್ಥಾನ ಕಲ್ಪಿಸಿಕೊಟ್ಟಿರುವುದು ವಿಶೇಷ ಗಮನ ಸೆಳೆಯುತ್ತದೆ.

ವೆಂಕಣ್ಣನಿಗೆ ಗಾಜಿನ ಬಾಟಲಿಗಳನ್ನು ಸಂಗ್ರಹಿಸುವ ಮಹದಾಸೆ ಆಕಸ್ಮಿಕವಾಗಿ ಜನ್ಮ ತಾಳಿತು. ಕೆಲ ವರ್ಷದ ಹಿಂದೆ ಬೆಂಗಳೂರಿನ ಮಿತ್ರರೊಬ್ಬರ ಮನೆಗೆ ಹೋದಾಗ, ಅಲ್ಲಿ ವಿನೂತನವಾದ ಗಾಜಿನ ಬಾಟಲಿಯೊಂದು ಇವರನ್ನು ಆಕರ್ಷಿಸಿತು. ಇಂತಹ ವಿಶಿಷ್ಟ ಬಾಟಲಿಗಳನ್ನು ಸಂಗ್ರಹಿಸಬೇಕೆಂಬ ಆಸೆ ಟಿಸಿಲೊಡೆಯಿತು. ಅಂದಿನಿಂದಲೇ ವೆಂಕಣ್ಣ ಗಾಜಿನ ಬಾಟಲಿಗಳನ್ನು ಸಂಗ್ರಹಿಸಲು ಪ್ರಾರಂಭಿಸಿದರಂತೆ. ಈಗ, ವೆಂಕಣ್ಣನ ಸ್ವಸ್ತಿಕ್ ಆರ್ಟ್ ಗ್ಯಾಲರಿಯಲ್ಲಿ ಸುಮಾರು ಎರಡು ಸಾವಿರಕ್ಕೂ ಮಿಕ್ಕ ವೈವಿಧ್ಯಮಯವಾದ ಬಾಟಲಿಗಳಿವೆ. ಒಂದು ಸೆಂ. ಮೀ. ನಿಂದ ಹಿಡಿದು 40 ಸೆಂ. ಮೀ. ಎತ್ತರದವರೆಗಿನ ಬಾಟಲಿಗಳು ಸ್ಥಾನ ಪಡೆದುಕೊಂಡಿವೆ. ಅವುಗಳು 5 ಮಿ. ಮೀ. ನಿಂದ 15 ಲೀಟರ್‌ವರೆಗಿನ ಸಾಮರ್ಥ್ಯದ ಬಾಟಲಿಗಳಾಗಿವೆ. ಬಾಟಲಿಗಳನ್ನು ಹುಬ್ಬಳ್ಳಿ, ಧಾರವಾಡ, ಗೋವಾ, ಬೆಳಗಾವಿ, ಭಟ್ಕಳ ಇತ್ಯಾದಿ ಕಡೆಗಳಿಂದ ಸಂಗ್ರಹಿಸಿದ್ದಾರೆ. ಕಾನಗೋಡ ಚಪ್ಪರಮನೆಯ ಸುಬ್ಬಣ್ಣ, ಕೊಪ್ಪಲತೋಟದ ಜಿ. ವಿ. ಜೋಶಿ ಅವರೂ ಹಲವಾರು ಗಾಜಿನ ಬಾಟಲಿಗಳನ್ನು ತಂದು ಕೊಟ್ಟಿದ್ದಾರೆ.

ಎಲ್ಲಿ ಹೋದರೂ ಅಲ್ಲಿ ಗಾಜಿನ ಬಾಟಲಿಗಳಿವೆಯೇ ಎಂದು ಇಣುಕಿ ನೋಡುವುದು ವೆಂಕಣ್ಣಗೆ ಈಗ ಒಂದು ಅಭ್ಯಾಸವೇ ಆಗಿದೆ. ಹೊಸ ನಮೂನೆಯ ಬಾಟಲಿ ಎಲ್ಲಿಯೇ ಇದ್ದರೂ ವೆಂಕಣ್ಣ ಅಲ್ಲಿಗೆ ಹಾಜರ್. 'ನಿಮಗೆ ಬೇಡವಾದ ಗಾಜಿನ ಬಾಟಲಿಗಳನ್ನು ಬೇಕಾಬಿಟ್ಟಿ ಎಸೆಯದೇ ನನ್ನ ಮ್ಯೂಸಿಯಂಗೆ ಕೊಡಿ' ಎಂಬುದು ಅವರ ವಿನಂತಿ.

**ಚಿತ್ರ- ಬರಹ: ಗಣಪತಿ ಹಾಸ್ಪುರ**



